ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 18-21
©*IIMRD*, Mysuru
IIMRD JOURNALS

www.iimrd.com

# ಬೆಂಗಳೂರು ಜಿಲ್ಲೆಯ ಇರುಳಿಗ ಬುಡಕಟ್ಟು ಸಮುದಾಯದ ಒಂದು ಅಧ್ಯಯನ

**ಡಾ. ಕುಮಾರ್ ಬಿ. ಕೆ**

ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ

**ಸಾರಾಂಶ: (Abstract)**

*ಈ ಲೇಖನದಲ್ಲಿ ಬೆಂಗಳೂರು ಜಿಲ್ಲೆಯ ಇರುಳಿಗ ಆದಿವಾಸಿ ಸಮುದಾಯದ ಇತಿಹಾಸ, ಸಾಮಾಜಿಕ ರಚನೆ, ಆರ್ಥಿಕ ಸ್ಥಿತಿ–ಗತಿ, ಶಿಕ್ಷಣ, ಆರೋಗ್ಯ, ಸಂಸ್ಕೃತಿ ಹಾಗೂ ನಗರೀಕರಣದ ಪ್ರಭಾವವನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಪರಂಪರೆಯಿಂದ ಅರಣ್ಯ ಆಧಾರಿತ ಜೀವನ ನಡೆಸುತ್ತಿದ್ದ ಈ ಸಮುದಾಯ ಇಂದಿನ ನಗರೀಕರಣ ಮತ್ತು ಕೈಗಾರಿಕೀಕರಣದ ಪರಿಣಾಮವಾಗಿ ಹಲವು ಬದಲಾವಣೆಗಳನ್ನು ಅನುಭವಿಸುತ್ತಿದೆ. ಈ ಅಧ್ಯಯನವು ಇರುಳಿಗ ಸಮುದಾಯದ ಸಮಸ್ಯೆಗಳು ಮತ್ತು ಅಭಿವೃದ್ಧಿಯ ಸಾಧ್ಯತೆಗಳನ್ನು ವಿಶ್ಲೇಸುತ್ತದೆ.*

**ಮುಖ್ಯಪದಗಳು (Keywords):** *ಇರುಳಿಗರು, ಆದಿವಾಸಿ ಸಮುದಾಯ, ಬೆಂಗಳೂರು ಜಿಲ್ಲೆ, ನಗರೀಕರಣ, ಆರ್ಥಿಕ ಸ್ಥಿತಿ*

## ಪೀಠಿಕೆ

ಇರುಳಿಗರು ಕರ್ನಾಟಕದ ಪ್ರಮುಖ ಆದಿವಾಸಿ ಸಮುದಾಯಗಳಲ್ಲಿ ಒಬ್ಬರಾಗಿದ್ದಾರೆ. ಇವರು ಮುಖ್ಯವಾಗಿ ಬೆಂಗಳೂರು ಜಿಲ್ಲೆಯ ಆನೇಕಲ್ ತಾಲೂಕು, ಬನ್ನೇರುಘಟ್ಟ ಅರಣ್ಯ ಪ್ರದೇಶ ಮತ್ತು ಕನಕಪುರ ಗಡಿ ಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ನಗರೀಕರಣ ಮತ್ತು ಅಭಿವೃದ್ಧಿ ಯೋಜನೆಗಳು ಇವರ ಜೀವನದ ಮೇಲೆ ಆಳವಾದ ಪ್ರಭಾವ ಬೀರಿವೆ.

## ಇರುಳಿಗ ಸಮುದಾಯದ ಇತಿಹಾಸ ಮತ್ತು ಮೂಲ

ಇರುಳಿಗರು ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಆದಿವಾಸಿ ಸಮುದಾಯಗಳಲ್ಲಿ ಒಬ್ಬರಾಗಿದ್ದಾರೆ. ಇವರು ಮುಖ್ಯವಾಗಿ ಕರ್ನಾಟಕ, ತಮಿಳುನಾಡು ಮತ್ತು ಆಂದ್ರ ಪ್ರದೇಶಗಳ ಕೆಲವು ಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರು ಜಿಲ್ಲೆ, ರಾಮನಗರ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಅರಣ್ಯ ಹಾಗೂ ಗುಡ್ಡ–ಗಾಡು ಪ್ರದೇಶಗಳಲ್ಲಿ ಇರುಳಿಗ ಸಮುದಾಯ ಕಂಡುಬರುತ್ತದೆ.

## ಮೂಲ

ಇರುಳಿಗರು ದ್ರಾವಿಡ ಮೂಲದ ಆದಿವಾಸಿಗಳೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. 'ಇರುಳು' ಅಥವಾ 'ರಾತ್ರಿ' ಎಂಬ ಪದ ತಮಿಳು ಭಾಷೆಯಿಂದ ಬಂದಿದ್ದು ಅದರ ಅರ್ಥ 'ಕತ್ತಲೆ' ಅಥವಾ 'ರಾತ್ರಿ'

*Please cite this article as:* ಕುಮಾರ್ ಬಿ. ಕೆ. (2025). ಬೆಂಗಳೂರು ಜಿಲ್ಲೆಯ ಇರುಳಿಗ ಬುಡಕಟ್ಟು ಸಮುದಾಯದ ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ. 18–21*

ಎನ್ನುವುದಾಗಿದೆ. ರಾತ್ರಿಯಲ್ಲಿ ಕಾಡಿನಲ್ಲಿ ಸಂಚರಿಸುವ ವಿಶಿಷ್ಟ ಸಾಮರ್ಥ್ಯ ಇವರಿಗಿದ್ದ ಕಾರಣ ಈ ಹೆಸರು ಬಂದಿರಬಹುದು ಎಂದು ನಂಬಲಾಗಿದೆ. ಕಾಡು ಇವರ ಜೀವನದ ಅವಿಭಾಜ್ಯ ಭಾಗವಾಗಿತ್ತು.

**ಪುರಾತನ ಜೀವನಶೈಲಿ**

ಆದಿ ಕಾಲದಲ್ಲಿ ಇರುಳಿಗರು ಸಂಪೂರ್ಣವಾಗಿ ಅರಣ್ಯ ಆಧಾರಿತ ಜೀವನ ನಡೆಸುತ್ತಿದ್ದರು. ಹಣ್ಣು–ಹಂಪಲು ಸಂಗ್ರಹ, ಜೇನು ಸಂಗ್ರಹ, ಬೇಟೆ ಹಾಗೂ ಔಷಧಿಯ ಸಸ್ಯಗಳ ಬಳಕೆ ಇವರ ಮುಖ್ಯ ಜೀವನೋಪಾಯವಾಗಿತ್ತು. ವಿಶೇಷವಾಗಿ ಇಲಿ, ತೋಡ, ಹಾವು ಹಿಡಿಯುವಲ್ಲಿ ಇವರು ಪರಿಣಿತಿಗಳಾಗಿದ್ದು ಗ್ರಾಮೀಣ ಸಮಾಜದಲ್ಲಿ ಇವರಿಗೆ ವಿಶೇಷ ಸ್ಥಾನಮಾನವಿತ್ತು.

**ಸಾಮಾಜಿಕ ಸಂಘಟನೆ**

ಇರುಳಿಗ ಸಮುದಾಯವು ಕುಲ ಮತ್ತು ಕುಟುಂಬ ಆಧಾರಿತ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿತ್ತು. ಸಮುದಾಯದ ಹಿರಿಯರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಪರಸ್ಪರ ಸಹಕಾರ, ಸಮುದಾಯ ಬಾಂದವ್ಯ ಮತ್ತು ಪ್ರಕೃತಿಯೊಂದಿಗೆ ಹೊಂದಾಣಿಕೆಯ ಜೀವನ ಇವರ ಸಂಪ್ರದಾಯವಾಗಿತ್ತು.

**ಐತಿಹಾಸಿಕ ಬದಲಾವಣೆಗಳು**

ಬ್ರಿಟೀಷರ ಕಾಲದಲ್ಲಿ ಅರಣ್ಯ ಕಾನೂನುಗಳು ಜಾರಿಗೆ ಬಂದ ನಂತರ ಇರುಳಿಗರ ಅರಣ್ಯ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಯಿತು. ಇದರ ಪರಿಣಾಮವಾಗಿ ಇವರ ಪರಂಪರಾನುಗತ ಜೀವನೋಪಾಯಕ್ಕೆ ಅಡ್ಡಿ ಉಂಟಾಯಿತು. ಸ್ವಾತಂತ್ರೋತ್ತರ ಕಾಲದಲ್ಲಿಯೂ ಅರಣ್ಯ ಸಂರಕ್ಷಣಾ ನೀತಿಗಳು ಮತ್ತು ನಗರೀಕರಣದಿಂದ ಇವರ ಜೀವನದಲ್ಲಿ ಮಹತ್ವದ ಬದಲಾವಣೆಗಳು ಕಂಡು ಬಂದವು.

**ಇಂದಿನ ಸ್ಥಿತಿ**

ಇಂದಿನ ಕಾಲದಲ್ಲಿ ಇರುಳಿಗ ಸಮುದಾಯವು ತನ್ನ ಪರಂಪರೆಯನ್ನು ಉಳಿಸಿಕೊಂಡಿದ್ದರೂ, ಬಹುಪಾಲು ಜನರು ಕೃಷಿ ಕೂಲಿ, ಕಟ್ಟಡ ಕಾಮಗಾರಿಗಳು ಮತ್ತು ದಿನಗೂಲಿ ಕೆಲಸಗಳಿಗೆ ತಿರುಗಿದ್ದಾರೆ. ಇತಿಹಾಸದಲ್ಲಿ ಸ್ವತಂತ್ರ ಅರಣ್ಯ ಜೀವನ ನಡೆಸುತ್ತಿದ್ದ ಸಮುದಾಯ ಇಂದು ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸುತ್ತಿದೆ.

**ಅಧ್ಯಯನದ ಉದ್ದೇಶಗಳು**

1. ಇರುಳಿಗ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಅಧ್ಯಯನ ಮಾಡುವುದು.
2. ನಗರೀಕರಣದ ಪ್ರಭಾವವನ್ನು ವಿಶ್ಲೇಷಿಸುವುದು.
3. ಪ್ರಮುಖ ಸಮಸ್ಯೆಗಳು ಮತ್ತು ಸವಾಲುಗಳನ್ನು ಗುರುತಿಸುವುದು.
4. ಸಮುದಾಯದ ಅಭಿವೃದ್ಧಿಗೆ ಸಲಹೆಗಳನ್ನು ನೀಡುವುದು.

**ಅಧ್ಯಯನದ ವಿಧಾನ**

ಈ ಅಧ್ಯಯನವು ಮಾಧ್ಯಮಿಕ ಮಾಹಿತಿಗಳಾದ ಪುಸ್ತಕಗಳು, ಪ್ರಕಟಿತ ಲೇಖನಗಳು, ಗೆಜೇಟೀಯರ್, ಸರ್ಕಾರಿ ವರದಿಗಳನ್ನು ಉಪಯೋಗಿಸಿಕೊಂಡು ಮತ್ತು ರಾಮನಗರ ಭಾಗದಲ್ಲಿರುವ ಇರುಳಿಗ

ಸಮುದಾಯಗಳ ಮುಖಂಡರುಗಳನ್ನು ಸಂಧರ್ಶಿಸಿ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರ ಕಾರ್ಯ ಅಧ್ಯಯನ ನೆಡೆಸಿ ವರದಿಯನ್ನು ತಯಾರಿಸಲಾಗಿದೆ.

**ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ**

ಇರುಳಿಗ ಸಮುದಾಯದಲ್ಲಿ ಸರಳ ಜೀವನಶೈಲಿ ಕಂಡುಬರುತ್ತದೆ. ಕುಟುಂಬ ಮತ್ತು ಸಮುದಾಯ ಕೇಂದ್ರಿತ ಸಾಮಾಜಿಕ ವ್ಯವಸ್ಥೆ ಇದೆ. ಪ್ರಕೃತಿ ಆರಾಧನೆ, ಪೂರ್ವಜರ ಆರಾಧನೆ, ಜಾನಪದ ಹಾಡುಗಳು ಮತ್ತು ನೃತ್ಯಗಳು ಇವರ ಸಂಸ್ಕೃತಿಯ ಮುಖ್ಯ ಅಂಶಗಳಾಗಿವೆ.

**ಆರ್ಥಿಕ ಅಂಶಗಳು**

ಇರುಳಿಗರು ಅರಣ್ಯ ಉತ್ಪನ್ನಗಳ ಸಂಗ್ರಹ, ಜೇನು ಸಂಗ್ರಹ, ಸ್ಥಳಬದಲಿಕೆಯ ಕೃಷಿಕಾರ್ಯ ನೆಡೆಸುತ್ತಿದ್ದಾರೆ. ನಗರೀಕರಣದ ಪರಿಣಾಮವಾಗಿ ಕೃಷಿ, ಕೂಲಿ, ಕಟ್ಟಡ ಕಾಮಗಾರಿಗಳು, ಕಾರ್ಖಾನೆ ಕೆಲಸಗಳು ಮತ್ತು ದಿನಗೂಲಿ ಉದ್ಯೋಗಗಳ ಮೇಲೆ ಅವಲಂಬಿತರಾಗಿದ್ದಾರೆ. ಬಹುತೇಕ ಉದ್ಯೋಗಗಳು ಅಸ್ಥಿರ ಮತ್ತು ಕಡಿಮೆ ಆದಾಯದವುಗಳಾಗಿವೆ.

**ಶಿಕ್ಷಣ ಮತ್ತು ಆರೋಗ್ಯ**

ಇರುಳಿಗ ಸಮದಾಯದಲ್ಲಿ ಶಿಕ್ಷಣಮಟ್ಟ ಇನ್ನೂ ಕಡಿಮೆ ಇದೆ. ಸರ್ಕಾರಿ ಶಾಲೆಗಳು ಮತ್ತು ಆಶ್ರಮ ಶಾಲೆಗಳು ಶಿಕ್ಷಣವನ್ನು ಉತ್ತೇಜಿಸುತ್ತಿದ್ದರೂ, ಉನ್ನತ ಶಿಕ್ಷಣಕ್ಕೆ ಪ್ರವೇಶ ಸೀಮಿತವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಅಪೌಷ್ಟಿಕತೆ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆ ಪ್ರಮುಖ ಸಮಸ್ಯೆಗಳಾಗಿವೆ.

**ನಗರೀಕರಣದ ಪ್ರಭಾವ**

ಬೆಂಗಳೂರು ನಗರದ ವೇಗವಾದ ವಿಸ್ತರಣೆ ಇರುಳಿಗ ಸಮುದಾಯದವರ ಜೀವನದಲ್ಲಿ ಮಹತ್ವದ ಬದಲಾವಣೆಗಳನ್ನು ತಂದಿದೆ. ಅರಣ್ಯ ಪ್ರದೇಶಗಳ ನಾಶ, ಅಭಿವೃದ್ಧಿ ಹೆಸರಿನಲ್ಲಿ ನಡೆಯುವ ರಸ್ತೆಗಳ ಅಗಲೀಕರಣ, ಕಲ್ಲುಗಣಿಗಾರಿಕೆ ಮತ್ತು ಅಣೆಕಟ್ಟುಗಳ ನಿರ್ಮಾಣ ಇವು ಇರುಳಿಗರ ಪರಂಪರಾನುಗತ ಉದ್ಯೋಗ ನಷ್ಟ ಮತ್ತು ಸಾಮಾಜಿಕ ಅಸಮಾನತೆಗಳನ್ನು ಹೆಚ್ಚು ಮಾಡಿವೆ.

**ಸರ್ಕಾರಿ ಯೋಜನೆಗಳು ಮತ್ತು ಅವುಗಳ ಪ್ರಭಾವ**

ಪರಿಶಿಷ್ಟ ಪಂಗಡ ಸಮುದಾಯಕ್ಕೆ ಜಾರಿಯಲ್ಲಿರುವ ವಸತಿ ಯೋಜನೆಗಳು, ಶಿಕ್ಷಣ ಸಹಾಯಧನ, ಪಿಂಚಣಿ ಮತ್ತು ಸ್ವಯಂ ಉದ್ಯೋಗ ಯೋಜನೆಗಳು ಇರುಳಿಗ ಸಮುದಾಯಕ್ಕೆ ಸಹಾಯ ಮಾಡುತ್ತಿವೆ. ಆದರೆ ಮಾಹಿತಿ ಕೊರತೆ ಮತ್ತು ದಾಖಲೆ ಸಮಸ್ಯೆಗಳು ಲಾಭ ಪಡೆಯಲು ಅಡ್ಡಿಯಾಗಿವೆ.

**ಪ್ರಮುಖ ಸಮಸ್ಯೆಗಳು**

- ಭೂಮಿ ಮತ್ತು ಅರಣ್ಯ ಹಕ್ಕುಗಳ ಕೊರತೆ
- ಬಡತನ ಮತ್ತು ನಿರುದ್ಯೋಗ
- ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆ

- ನಗರೀಕರಣ ತಂದ ಆವಾಂತರ

**ಸಲಹೆಗಳು**

- ಶಿಕ್ಷಣ ಮತ್ತು ಮೂಲ ಸೌಕರ್ಯಗಳ ಸುಧಾರಣೆ
- ಕೌಶಲ್ಯಾಭಿವೃದ್ಧಿ ತರಭೇತಿಗಳ ಜಾರಿ
- ಅರಣ್ಯ ಭೂ–ಹಕ್ಕುಗಳ ರಕ್ಷಣೆ
- ಸಮುದಾಯ ಆಧಾರಿತ ಅಭಿವೃದ್ಧಿ ಯೋಜನೆಗಳು

**ಉಪಸಂಹಾರ**

ಇರುಳಿಗ ಸಮುದಾಯದ ಇತಿಹಾಸ ಮತ್ತು ಮೂಲವು ಪ್ರಕೃತಿ, ಅರಣ್ಯ ಮತ್ತು ಮಾನವ ಜೀವನದ ಆಳವಾದ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಇವರ ಜೀವನಶೈಲಿ ಮತ್ತು ಸಂಸ್ಕೃತಿ ದಕ್ಷಿಣ ಭಾರತದ ಆದಿವಾಸಿ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ. ಈ ಸಮುದಾಯದ ಸಂರಕ್ಷಣೆ ಮತ್ತು ಅಭಿವೃದ್ಧಿ ಇಂದಿನ ಸಮಾಜದ ಪ್ರಮುಖ ಜವಾಬ್ದಾರಿಯಾಗಿದೆ.

ಇರುಳಿಗ ಸಮುದಾಯವು ಇಂದಿನ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಲವಾರು ಸವಾಲುಗಳನ್ನು ಎದುರಿಸಿತ್ತಿದೆ. ಸಮಗ್ರ ಮತ್ತು ಸಮಾವೇಶಿತ ಅಭಿವೃದ್ಧಿ ನೀತಿಗಳ ಮೂಲಕ ಮಾತ್ರ ಈ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- Manjunatha B R, Annapurna M and Shylaja K. (2014). Socio-economic life of Iruliga Tribe in Karnataka. Antrocom Online Journal of Anthropology ,Vol. 10. No. , 69-71
- Nanjundaiah and Iyer. (1930), The Mysore Tribes and Castes,Vol-III, Mysore University, Mysore, page-516 retrieved from on 03-12-2018
- Thurston E. (1909). Native Man in southern India, Journal of the Royal society of arts. 57(2942):417-425,
- Thurston E. (1987). Castes and Tribes of Southern India, Vol. VIII, Asian Educational Services, Delhi, p. 10